ಚಾಮುಂಡೇಶ್ವರಿ ವಿದ್ಯುತ್ ಸರಬರಾಜು
ನಿಗಮ ನಿಯಮಿತ
(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ)
ಚಾವಿಸನಿನಿ, ಕಾರ್ಯ ಮತ್ತು ಪಾಲನಾ
ಉಪವಿಭಾಗ ಬೆಳ್ಳೂರು-571418
ದೂರವಾಣಿ: 9449598641

CHAMUNDESHWARI ELECTRICITY
SUPPLYCORPORATION LIMITED
(A Governnment of KarnatakaUndertaking)
Assistant Executive Engineer(Ele)
CESC, O & M Subdivision, Bellur
Web Site: www.cescmysore.org.
E-mail ID: aeebellursubdivision@gmail.com

Company Identity Number[CIN]:-U40109KA2004SGC035177

ಕ್ರಮ ಸಂಖ್ಯೆ: ಸ.ಕಾ.ನಿ.ಇಂ.(ವಿ)/ಸ.ಇಂ(ತಾ)/ಬೆಳ್ಳೂರು/23-24/ 2149 ದಿನಾಂಕ: 15/12/2023

## ಜನಸಂಪರ್ಕ ಸಭೆಯ ನಡಾವಳಿಗಳು

**ದಿನಾಂಕ: 15/12/2023 ರಂದು ಶುಕ್ರವಾರ ಪೂರ್ವಾಹ್ನ 11:00 ಗಂಟೆಗೆ ನಾಗಮಂಗಲ ತಾಲ್ಲೂಕಿನ ಬೆಳ್ಳೂರು ಉಪ ವಿಭಾಗದ ಕಛೇರಿ ಆವರಣದಲ್ಲಿ ನಡೆದ 2 ತ್ರೈಮಾಸಿಕ ಜನಸಂಪರ್ಕ ಸಭೆಯ ನಡಾವಳಿಗಳು.**

**ಹಾಜರಿದ್ದ ಅಧಿಕಾರಿಗಳು / ನೌಕರರು.**

ಶ್ರೀ/ಶ್ರೀಮತಿ/ಕುಮಾರಿ:

1) ಮರಿಸ್ವಾಮಿ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಬೆಳ್ಳೂರು ಉಪವಿಭಾಗ
2) ಹರೀಶ್ ಎನ್.ಜಿ : ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ನಾಗಮಂಗಲ
3) ದಿಲೀಪ್.ಎಸ್.ಜಿ : ಸಹಾಯಕ ಇಂಜಿನಿಯರ್ ಬೆಳ್ಳೂರು ಶಾಖೆ
4) ವೇಣುಗೋಪಾಲ್ ಎಂ.ಎನ್ : ಕಿರಿಯ ಇಂಜಿನಿಯರ್(ವಿ) ಬಿಂಡಿಗನವಿಲೆ ಶಾಖೆ
5) ಚೇತನ್ ಕೆ.ಸಿ : ಕಿರಿಯ ಇಂಜಿನಿಯರ್ ಕದಬಹಳ್ಳಿ ಶಾಖೆ
6) ವಿಜಯ್‌ಕುಮಾರ್ ಪಿ : ಪ್ರಭಾರ ಸಹಾಯಕ ತಾಂತ್ರಿಕ ಇಂಜಿನಿಯರ್ ಬೆಳ್ಳೂರು ಉಪವಿಭಾಗ
7) ಮನೋಜ್ : ಪ್ರಭಾರ ಹಿರಿಯ ಸಹಾಯಕರು ಬೆಳ್ಳೂರು ಉಪವಿಭಾಗ

ದಿನಾಂಕ:15.12.2023 ಶುಕ್ರವಾರ ಸಮಯ 11:00 ಗಂಟೆಗೆ ಬೆಳ್ಳೂರು ಉಪವಿಭಾಗ ಕಛೇರಿಯ ಸಭಾಂಗಣದಲ್ಲಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿದ್ಯುತ್) ರವರ ಅಧ್ಯಕ್ಷತೆಯಲ್ಲಿ ಹಾಗೂ ಈ ಕೆಳಕಂಡಂತೆ ಹಾಜರಿದ್ದ ಅಧಿಕಾರಿಗಳು ಗ್ರಾಹಕರುಗಳ/ದೂರುದಾರರ ಸಮ್ಮುಖದಲ್ಲಿ ಜನ ಸಂಪರ್ಕ ಸಭೆಯನ್ನು ನಡೆಸಲಾಯಿತು.

ಶ್ರೀ ಮನೋಜ್, ಹಿರಿಯ ಸಹಾಯಕ ರವರ ಪ್ರಾರ್ಥನೆಯೊಂದಿಗೆ ಜನಸಂಪರ್ಕ ಸಭೆಯು ಆರಂಭವಾಯಿತು. ಶ್ರೀ ವಿಜಯಕುಮಾರ ಪಿ ರವರು ಸಭೆಗೆ ಬಂದ ಅಧಿಕಾರಿ ವರ್ಗದವರನ್ನು ಹಾಗೂ ಗ್ರಾಹಕರನ್ನು ಸಭೆಗೆ ಸ್ವಾಗತಿಸಿದರು.

ವಿದ್ಯುತ್ ಗ್ರಾಹಕರ ಕುಂದು ಕೊರತೆಗಳನ್ನು ಆಲಿಸಿ ಬಗೆಹರಿಸುವ ನಿಟ್ಟಿನಲ್ಲಿ ಪ್ರತಿ ಮೂರು ತಿಂಗಳಿಗೊಮ್ಮೆ ಜನ ಸಂಪರ್ಕ ಸಭೆಯನ್ನು ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿದ್ಯುತ್) ರವರ ಅಧ್ಯಕ್ಷತೆಯಲ್ಲಿ

Scanned with CamScanner

ನಡೆಸುವಂತೆ ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗವು ಜಕಾತಿ ಆದೇಶ-2019 ರಲ್ಲಿ ಆದೇಶವಾಗಿರುತ್ತದೆ. ಬೆಳ್ಳೂರು ಉಪವಿಭಾಗ ವ್ಯಾಪ್ತಿಯ ಗ್ರಾಹಕರುಗಳು ವಿದ್ಯುತ್ ಸಂಬಂಧಿತ ದೂರುಗಳನ್ನು ಮೌಖಿಕವಾಗಿ ಅಥವ ಲಿಖಿತವಾಗಿ ಸಲ್ಲಿಸಿ, ವಿದ್ಯುತ್‌ಗೆ ಸಂಬಂಧಪಟ್ಟ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳುವಂತೆ ವಿದ್ಯುತ್ ಗ್ರಾಹಕರಲ್ಲಿ ಅಧ್ಯಕ್ಷತೆ ವಹಿಸಿ ಮಾತನಾಡಿದ ಶ್ರೀ ಮರಿಸ್ವಾಮಿ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿದ್ಯುತ್), ಬೆಳ್ಳೂರು ರವರು ತಿಳಿಸಿದರು ಮತ್ತು ಸೆಪ್ಟಂಬರ್-2023 ರಂದು ನಡೆದ ವಿದ್ಯುತ್ ಗ್ರಾಹಕರ ಜನ ಸಂಪರ್ಕ ಸಭೆಯ ದೂರುಗಳ ಬಗ್ಗೆ ಹಾಗೂ ತೆಗೆದುಕೊಂಡ ಕ್ರಮಗಳ ಬಗ್ಗೆ ಅನುಪಾಲನಾ ವರದಿಯನ್ನು ಸಭೆಗೆ ವಿವರಿಸಿದರು.

**1) ಲಕ್ಕಣ್ಣಗೌಡ ಗರುಡನಹಳ್ಳಿ ಗ್ರಾಮಸ್ಥರು ಮೊಬೈಲ್ ನಂ:-9448343712**

ದೂರು:- ಗರುಡನಹಳ್ಳಿ ಗ್ರಾಮದ ಲಕ್ಕಣ್ಣಗೌಡ ರವರ ಎಲ್‌ಟಿ ಮಾರ್ಗ ಜೋತು ಬಿದ್ದಿದ್ದು 3 ಮಧ್ಯವರ್ತಿ ಕಂಬ ಅಳವಡಿಸಲು ಕೋರಿರುತ್ತಾರೆ.

ಕ್ರಮ:- ಬೆಳ್ಳೂರು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲಿಸಿ ನಿಗಮದ ನಿಯಮಾನುಸಾರ ಕ್ರಮ ಕೈಗೊಳ್ಳಲು ಸೂಚಿಸಲಾಗಿದೆ.

**2) ಹೊಂಬೇಗೌಡ ಅಗಚಹಳ್ಳಿ ಗ್ರಾಮಸ್ಥರು ಮೊಬೈಲ್ ನಂ:-9611937175**

ದೂರು: ಅಗಚಹಳ್ಳಿ ಗ್ರಾಮದ ಹೊಂಬೇಗೌಡ ರವರ ಜಮೀನಿನಲ್ಲಿ ತೆಂಗಿನ ಮರಗಳಿದ್ದು ಅಕ್ರಮವಾಗಿ ಸರ್ವಿಸ್ ಮೈನ್ ವೈರ್ ಎಳೆದಿದ್ದು ತೆರವುಮಾಡಿಸಲು ಕೋರಿರುತ್ತಾರೆ.

ಕ್ರಮ:- ಬೆಳ್ಳೂರು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ನಿಗಮದ ನಿಯಮಾನುಸಾರ ಮಾಡಿ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.

**3) ಶ್ರೀನಿವಾಸ್ ಇ ಎಸ್ ಎಸ್ ವಿ ವೈ ಕನ್ಸ್ಟ್ರಕ್ಷನ್ ಲಿಮಿಟೆಡ್ ವರಹಸಂದ್ರ ಗ್ರಾಮಸ್ಥರು ಮೊಬೈಲ್ ನಂ:-8453556533**

ದೂರು: **ವರಹಸಂದ್ರ** ಗ್ರಾಮದ **ಶ್ರೀನಿವಾಸ್ ಇ ಎಸ್ ಎಸ್ ವಿ ವೈ ಕನ್ಸ್ಟ್ರಕ್ಷನ್ ಲಿಮಿಟೆಡ್** ರವರ RR ಸಂಖ್ಯೆ ಬಿಲ್ಲಿಂಗ್ ಸಮಸ್ಯೆ ಇರುವುದರಿಂದ ಸರಿಪಡಿಸಿಕೊಡಲು ಕೋರಿರುತ್ತಾರೆ.

ಕ್ರಮ:- ಬೆಳ್ಳೂರು ಶಾಖಾಧಿಕಾರಿಗಳಿಗೆ ಸ್ಥಳ ಪರಿಶೀಲನೆ ನಿಗಮದ ನಿಯಮಾನುಸಾರ ಮಾಡಿ ಸೂಕ್ತ ಕ್ರಮ ಕೈಗೊಳ್ಳಲು ತಿಳಿಸಿರುತ್ತಾರೆ.

ದೂರನ್ನು ನೀಡಿದ ಗ್ರಾಹಕರ ಸಂಖ್ಯೆ :-3

ಒಟ್ಟು ದೂರು/ಸಮಸ್ಯೆಗಳು :- 3

ಒಟ್ಟು ಹಾಜರಿದ್ದ ಗ್ರಾಹಕರ ಸಂಖ್ಯೆ:-10

ಮೇಲ್ಕಂಡ ದೂರುಗಳು ಮುಂದಿನ ಜನಸಂಪರ್ಕ ಸಭೆಯಲ್ಲಿ ಅನುಸರಣಾ ವರದಿಯೊಂದಿಗೆ ನಿವಾರಣೆಯಾಗಿರುವುದಾಗಿ ಸಭೆಯ ಅಧ್ಯಕ್ಷತೆ ವಹಿಸಿರುವ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ) ರವರು ತಿಳಿಸಿದರು.

Scanned with CamScanner

ನಂತರ ಶ್ರೀ ದಿಲೀಪ್.ಎಸ್.ಜಿ ಸಹಾಯಕ ಇಂಜಿನಿಯರ್ ರವರು ಸಭೆಯಲ್ಲಿ ಭಾಗವಹಿಸಿದ್ದ ಎಲ್ಲಾ ಅಧಿಕಾರಿಗಳು/ನೌಕರರು ಹಾಗೂ ಗ್ರಾಹಕರುಗಳಿಗೆ ವಂದನಾರ್ಪಣೆ ಸಲ್ಲಿಸಿದ ನಂತರ ಸಭೆಯನ್ನು ಅಪರಾಹ್ನ 1 ಗಂಟೆಗೆ ಮುಕ್ತಾಯಗೊಳಿಸಲಾಯಿತು.

ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ),
ಚಾ.ವಿ.ಸ.ನಿ.ನಿ, ಕಾ ಮತ್ತು ಪಾ ಉಪವಿಭಾಗ
ಬೆಳ್ಳೂರು.

ಪ್ರತಿಯನ್ನು ಇವರ ಮಾಹಿತಿಗಾಗಿ ಕಳುಹಿಸಲಾಗಿದೆ.

1. ಅಧೀಕ್ಷಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವೃತ್ತ ಕಛೇರಿ ಮಂಡ್ಯ ರವರ ಅವಗಾಹನೆಗಾಗಿ.
2. ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಸೆಸ್ಕ್, ಕಾರ್ಯ ಮತ್ತು ಪಾಲನಾ ವಿಭಾಗ ನಾಗಮಂಗಲ.
3. ಲೆಕ್ಕಾಧಿಕಾರಿ,(ಆಂಪ), ಚಾ.ವಿ.ಸ.ನಿ.ನಿ.,ಕಾ ಮತ್ತು ಪಾ ವಿಭಾಗ ನಾಗಮಂಗಲ.
4. ಲೆಕ್ಕಾಧಿಕಾರಿ, ಚಾ.ವಿ.ಸ.ನಿ.ನಿ.,ಕಾ ಮತ್ತು ಪಾ ವಿಭಾಗ ನಾಗಮಂಗಲ.
5. ಕಛೇರಿ ಪ್ರತಿ.

Scanned with CamScanner